MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 4-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕೃಷ್ಣಾ, ಎನ್‌ಟಿಆರ್ ಜಿಲ್ಲೆಗಳಲ್ಲಿ ಮಳೆಯಿಂದ ಜೋಳ, ಭತ್ತ ಬೆಳೆ ಹಾನಿ

ಸತತ ಮಳೆಯಿಂದ ಕೃಷ್ಣಾ ಹಾಗೂ ಎನ್.ಟಿ.ಆರ್ ಜಿಲ್ಲೆಗಳಲ್ಲಿ ಕಟಾವಿಗೆ ಬಂದ ಜೋಳ ಬೆಳೆಗಳು ನೀರಿನಿಂದ ನೆನೆಯುತ್ತಿದೆ. ರೈತರು ಬೆಳೆ ಒಣಗಿಸಲು ಪ್ರಯಾಸ ಪಡುತ್ತಿದ್ದಾರೆನ್ನಲಾಗಿದೆ. ಮಳೆ ಇನ್ನೂ ಮುಂದುವರೆದರೆ ರೈತರಿಗೆ ಬೆಳೆ ಕೈ ತಪ್ಪುವ ಆತಂಕ ಹೊಂದಿದ್ದಾರೆನ್ನಲಾಗಿದೆ. 2 ಲಕ್ಷದ 50 ಸಾವಿರ ಎಕರೆಗಳಲ್ಲಿ ಭತ್ತ ಹಾಗೂ 50000 ಎಕರೆಗಳಲ್ಲಿ ಜೋಳ ಬೆಳೆದಿದ್ದಾರೆನ್ನಲಾಗಿದೆ.

## 2023–24 ರಲ್ಲಿ ಭಾರತದ ಅಕ್ಕಿ ರಫ್ತು ಇಳಿಕೆ ಸಾಧ್ಯತೆ

20 ಶೇಕಡಾ ರಫ್ತು ತೆರಿಗೆ ಹಾಗೂ ಅಕ್ಕಿ ದರ ಹೆಚ್ಚಳದಿಂದ 2023–24 ಆರ್ಥಿಕ ವರ್ಷದಲ್ಲಿ ಭಾರತದಿಂದ ಅಕ್ಕಿ ರಫ್ತು ಇಳಿಕೆಯಾಗುವ ಸಾಧ್ಯತೆಯಿದೆಯೆಂದು ಅಖಿಲ ಭಾರತೀಯ ಅಕ್ಕಿ ರಫ್ತು ಅಸೋಸಿಯೇಶನ್ ನ ಕಾರ್ಯಕಾರಿ ನಿರ್ದೇಶಕರಾದ ವಿನೋದ್ ಕೌಲ್ ಹೇಳಿದ್ದಾರೆನ್ನಲಾಗಿದೆ. ಈಗ ಇಥೆನಾಲ್ ಉತ್ಪಾದನೆಯಲ್ಲಿ 65 ಶೇಕಡಾ ಕಬ್ಬಿನಿಂದ ಸಕ್ಕರೆ ತಯಾರಿಯಾಗುವ ಉತ್ಪನ್ನ ಮೊಲಾಸೆಸ್‌ನ ಬಳಕೆಯಿದ್ದು, ಕಡಿಯಕ್ಕಿಯ ಬಳಕೆ 11 ಶೇಕಡಾ ಹಾಗೂ ಉಳಿದ ಪಾಲು ಇತರ ಧ್ಯಾನಗಳದ್ದೆನ್ನಲಾಗಿದೆ. 2025ರ ವೇಳೆಗೆ ಇಂಧನ ಬಳಕೆಗೆ 20 ಶೇಕಡಾ ಇಥೆನಾಲ್ ಉತ್ಪಾದನಾ ಗುರಿಯನ್ನು ಕಬ್ಬಿನ ಬಳಕೆಯಿಂದ ಮಾತ್ರ ಪೂರೈಸಲು ಸಾಧ್ಯವಾಗದೆನ್ನಲಾಗಿದೆ. ಇದರೊಂದಿಗೆ ಕಡಿಯಕ್ಕಿ, ಜೋಳ ಹಾಗೂ ಮತ್ತಿತರ ಧ್ಯಾನಗಳ ಬಳಕೆಯಾಗಬಹುದೆನ್ನಲಾಗಿದೆ.

## ಸರಕಾರಿ ದಾಸ್ತಾನಿನಿಂದ 3 ತಿಂಗಳಿಗೊಂದಾವರ್ತಿ ಗೋಧಿ ಮಾರಾಟ

ಬೆಲೆ ನಿಯಂತ್ರಣದಲ್ಲಿರಲು ಸರಕಾರ ತನ್ನ ದಾಸ್ತಾನಿನಿಂದ ಪ್ರತಿ 3 ತಿಂಗಳಿಗೊಂದಾವರ್ತಿ ಗೋಧಿ ಮಾರುಕಟ್ಟೆಯ ಮೂಲಕ ಮಾರಾಟ ಮಾಡಲಿದೆಯೆನ್ನಲಾಗಿದೆ. ಜುಲೈ ತಿಂಗಳಿಂದಾರಂಭಿಸಿ ಗೋಧಿಯನ್ನು ಬಿಡುಗಡೆ ಮಾಡಲಿದೆಯೆನ್ನಲಾಗಿದೆ. ಹೊಸ ಬೆಳೆಯ ಆವಕದ ಗೋಧಿ ಹಾಗೂ ಅದರ ಉತ್ಪಾದನೆಗಳ ದರ ಇಳಿಕೆಯಾಗಲಾರಂಭಿಸಿದೆ. ಖಾಸಗಿ ವ್ಯಾಪಾರಿಗಳು ಅಧಿಕ ಗೋಧಿ ಖರೀದಿಸುತ್ತಿದ್ದು ಮುಂದಿನ ದಿನಗಳಲ್ಲಿ ದರ ಹೆಚ್ಚಳಗೊಳಿಸುವ ಶಂಕೆಯಿಂದ ಸರಕಾರ ಮಾರುಕಟ್ಟೆ ದರ ನಿಯಂತ್ರಣದಲ್ಲಿಡಲು ತನ್ನ ದಾಸ್ತಾನಿನಿಂದ ಮಾರಾಟ ಮಾಡಲಿದೆಯೆನ್ನಲಾಗಿದೆ. ಸರಕಾರ ಸಾಕಷ್ಟು ಗೋಧಿ ದಾಸ್ತಾನು ಹೊಂದಿದೆಯೆನ್ನಲಾಗಿದೆ.